

ಮೂಡಲ ಹರಿದು ಸೂರ್ಯ ಮೇಲೇರಿ ಬಂದಾಗ ಪದ್ದಕ್ಕ ಮತ್ತು ನಾನು ಎಂದಿನಂತೆ ಗುಡ್ಡದ ಹಾದಿ ಹಿಡಿದೆವು. ಅಲ್ಲಿ ಹೋಗಿ ನೋಡಿದಾಗ ನಮಗೊಂದು ಅಚ್ಚರಿ ಕಾದಿತ್ತು. ಆ ಹುಂಡಿಯನ್ನು ನೋಡಿ ಬೆರಗಾಗಿ, ಹೊಡಮರಳಿ ಊರ ಹೊಕ್ಕೆವು. ಊರ ಕಿವಿಗೆ ವಿಷಯ ಮುಟ್ಟಿಸಿದೆವು. ಊರಲ್ಲಿ ಗುಸುಗುಸು ಸುದ್ದಿ ಹರದಾಡತೊಡಗಿತು.

ಕವಡಿ ಈರಯ್ಯ ಒಂದss ಸವನ ಥೈ ಥೈ ಕುಣಕೋತ ಹಿರೇಗುಡ್ಡದ ಕಡೆ ಓಡತೊಡಗಿದ. ಇಡೀ ಊರ ಮಂದಿಯಲ್ಲ ಅವನ ಹಿಂದೆ ಓಡತೊಡಗಿದರು. 'ಅಲಾ ಬಡ್ಡಿ ಮಗಾ ಈರಾ ಮತ್ತೇನೋ ಮಸಲತ್ತ ಮಾಡಾಕ ಹ್ವಂಟಾನೆಂದು' ಪಾಟೀಲರು ಅವನು ಓಡುವ ಪರಿ ಕಂಡು ಕಕ್ಕಾಬಿಕ್ಕಿಯಾಗಿ ನಗತೊಡಗಿದರು. ಈರಯ್ಯ ಒಂದೇ ಸವನೇ ದಸಾ ದಸಾ ತೇಕುತ್ತಾ, ಮೈಯ್ಯಾಗ ದೇವಿ ಬಂದವರಗತೆ ನಟಿಸುತ್ತಾ ಬಂವಗೂಡುತ್ತಾ ಹಿರೇಗುಡ್ಡ ಮುಟ್ಟಿದ. ದೇವಿ ಇದ್ದ ಜಾಗಕ್ಕೆ ಹೋಗಿ, ಮೈಮುರಿಯುತ್ತಾ, ಗೋಣು ಹೊರಳಿಸಿ ಹೆಂಗೆಂಗೋ ವಿಚಿತ್ರವಾಗಿ ಮಾಡುತ್ತಾ ಜೋರಾಗಿ ಕಿರುಚುತ್ತಾ, ನೋಡುವ ಜನರನ್ನು ಗಾಬರಿಗೊಳಿಸಿ, 'ಏ ಮಕ್ಕಳಾ ನೀವ್ಯಾರೂ ನನ್ನ ಗುಡಿ ಕಟ್ಟುವ ಉಸಾಬರೀ ಮಾಡಲಿಲ್ಲ, ನಿನ್ನೆ ರಾತ್ರೀ ನಾನss ಎದ್ದು, ಇಷ್ಟೆಲ್ಲಾ ನೆಲ ಹಡ್ಡಿ, ಗುಡಿ ಕಟ್ಟಾಕ ತರಾ ಕಡದೀನಿ, ನಿಂವೇನ ನನಗ ಗುಡಿ ಕಟ್ಟತ್ತಿರೋ ನಿಮಗ ನನ್ನ ಕೈ ತೋರಸ್ಲೋ' ಎಂದು ಕವಡಿ ಈರಯ್ಯ ನೆಲದ ಮ್ಯಾಲ ನಿಲ್ಲದ್ಹಂಗ ಥೈ ಥೈ ಕುಣಿಯತೊಡಗಿದ.

ಊರ ಮಂದಿಯಲ್ಲಾ ಕೈ ಮುಗಿದ, 'ಯವ್ವಾ ತಾಯಿ ಆದಷ್ಟ ಲಗೂನ ಕಟ್ಟಸ್ತೀವಿ. ನೀನು ಮೊದಲ ಶಾಂತಾಗವ್ವಾ' ಎಂದು ಕೈ ಮುಗದ್ರೂ ಈರಯ್ಯ ತನ್ನ ಕುಣತಾ ಇನ್ನ ನಿಲ್ಲಿಸಿರಲಿಲ್ಲ. 'ಹಹ ಹಹ ಆಆ ಹಾಹಾ ಹಾಹಾ' ಅಂತ ಗಡಗಡ ನಡುಗುತ್ತಾ, 'ನನಗ ಭಾಳ ಅಪಚಾರ ಆಗೇತಿ, ನನಗ ದಲಿತರ ಹುಡಗಿ ಕೈಯಿಂದ ಪೂಜೆ ಮಾಡಿಸಿ ನನ್ನ ಮೈಯಲ್ಲಾ ಮೈಲಗಿ ಮಾಡೀರೀ, ನನ್ನ ಮೈಲಗಿ ಮೊದಲ ತೊಳಿಬೇಕು, ನನ್ನ ಸವಾರಿನೇ ನನ್ನ ನಿತ್ಯವೂ ಪೂಜಾ ಮಾಡ್ಬೇಕು, ನಾ ಹೇಳಿದ್ದಂಗ ಒಂದವ್ಯಾಳೆ ನೆಡಿಲಿಲ್ಲಂದ್ರ ಇಡೀ ಊರಿಗೂರ ಸ್ಮಶಾನ ಮಾಡ್ತೀನಿ' ಎಂದು ಟಣ್ ಟಣ್ ಜಿಗಿದು ದಸ್ ದಸ್ ತೇಕುತ್ತಾ ಕವಡಿ ಈರಯ್ಯ ಒಂದ ನಮೂನಿ ಮಾಡತೊಡಗಿದ.

'ಆಗ್ಲೆವ್ವಾ ನೀ ಅಂದ್ಹಂಗ ಆಗ್ಲಿ ನಿನ್ನ ಕುದರಿನ ನಿನ್ನ ಪೂಜಾ ಮಾಡ್ಲಿ' ಎಂದು ಊರ ಮಂದಿ ದೇವಿಯ ಮಾತಿಗೆ ಕಿಮ್ಮತ್ತು ಕೊಟ್ಟು ಒಪ್ಪೊಕೊಂಡ್ರು.

'ಆ ಹುಡುಗಿ ಕೂಡಿಟ್ಟ ದುಡ್ಡ ಮೊದಲ ನನ್ನ ಸವಾರಿ ಕೈಯಾಗ ಕೊಡ್ಬೇಕು, ಇಲ್ಲಂದ್ರ ಒಂದ ಹೋಗಿ ಹನ್ನೊಂದ ಮಾಡ್ತಿನೀ' ಎಂದು ಕಟಕಟ ಹಲ್ಲು ಕಡಿದ ಈರಯ್ಯ.

ಆಗ ಪದ್ದಕ್ಕ ಗಡಗಡ ನಡುಗುತ್ತಾ ಕವಡಿ ಈರಯ್ಯನ ಮುಂದೆ ಹೋಗಿ ಕೈ ಮುಗಿದು, 'ಆಯ್ತವ್ವಾ ತಾಯಿ ಕೂಡಿಟ್ಟ ಹಣ ನಿನಗ ಒಪ್ಪಸ್ತೀನಿ, ನಾನು ನಿನ್ನ ಮುಟ್ಟಿ ಪೂಜಿ ಮಾಡಿ ದೊಡ್ಡ ತಪ್ಪ ಮಾಡೀನಿ, ನನ್ನ ತಪ್ಪ ನಿನ್ನ ಹೊಟ್ಯಾಗ ಹಾಕ್ಕೊಂಡ ನಿನ್ನ ಮಗಳಂತ ನನ್ನ ಕ್ಷಮಿಸವ್ವಾ' ಎಂದು ಪದ್ದಕ್ಕ ಬಿಕ್ಕಿ ಬಿಕ್ಕಿ ಅಳುವಾಗ, ಈರಯ್ಯ ಗಡಗಡ ನಡುಗುತ್ತಾ ಬಂದು ಪದ್ದಕ್ಕನ ದುಬ್ಬದ ಮ್ಯಾಲ ಒಂದೇಟು ಹಾಕಿ, 'ನಿನ್ನ ತಪ್ಪೆಲ್ಲ ಕ್ಷಮಿಸೀನಿ ನೀ ಚಿಂತಿ ಮಾಡಬ್ಯಾಡ, ಇನ್ನಮ್ಯಾಲಿಂದ ನನ್ನ ಮುಟ್ಟಬ್ಯಾಡ, ನನ್ನ ಸನೇಕ ಬರಬ್ಯಾಡ' ಎಂದು ಕವಡಿ ಈರಯ್ಯ ನೆಲದ ಮೇಲೆ ಉರುಳಾಡತೊಡಗಿದ.

ಊರ ಬಂದಿಯಲ್ಲಾ ದೇವಿಯ ಲೀಲಾ ನೋಡಿ ದಂಗ ಬಡದ ಕೈಮುಗದ ನಿಂತ್ಕೊಂಡ್ರು. ಈ ದೇವಿ ಸಾಮಾನ್ಯದಾಕಿ ಅಲ್ಲಾ. ಅಕಿಗೆ ಏನಾದ್ರೂ ಹೆಚ್ಚು ಕಮ್ಮಿ ಆದ್ರೂ ಈರಯ್ಯನ ಮೈಯ್ಯಾಗ ಬಂದ ಹೇಳಕಿ ಕೊಡ್ತಾಳೆಂದು ಅಲ್ಲಿದ್ದವರು ತಲಾಗೊಂದೊಂದು ಮಾತಾಡತೊಡಗಿದರು. ಅಲ್ಲಿದ್ದ ಕೆಲವು ಮ್ಯಾಲ್ಜಾತಿಯ ಹೆಂಗಸರು ಪದ್ದಕ್ಕಗ ಚುಚ್ಚಿಚುಚ್ಚಿ ಮಾತಾಡಿ ಮನ ನೋಯಿಸಿದರು.

ಆಗ ಪದ್ದಕ್ಕನ ಕಣ್ಣಾಗೀನ ನೀರು ಜೋಗದಂತೆ ಜರೆಯುತ್ತಲಿತ್ತು. ಮಸ್ಯಾಳ ಗಿಡದ ಕೆಳಗಿದ್ದ ದೇವಿಗೆ ಕಟ್ಟಕಡೆದಾಗೊಮ್ಮೆ ಕೈ ಮುಗಿದು ಭಾರವಾದ ಮನಸ್ಸಿನಿಂದ ಪದ್ದಕ್ಕ ಊರಿನ ಹಾದಿ ಹಿಡಿದಳು. ಅವಳ ಹಿಂದಿಂದೆ ನಾನೂ ನಡೆಯುತ್ತಲೇ ಇದ್ದೆ.

●